ಬಂದಂತಾಯಿತು. 'ಇನ್ನು ಬರಲ್ಲ' ಅಂತ ಹೇಳಿ, ಆ ಅಪರಿಚಿತ ವ್ಯಕ್ತಿಗೆ ಕೈಮುಗಿದು, ಅಲ್ಲಿಂದ ಬಿರುಸು ಹೆಜ್ಜೆಗಳನ್ನಿಡುತ್ತ ಕೆರೆ ಅಂಗಳವನ್ನು ದಾಟಿದೆ. ಆ ಅಪರಿಚಿತ ವ್ಯಕ್ತಿ ಆ ದಿನ ನನ್ನನ್ನು ಕಾಪಾಡಲೆಂದು ಬಂದ ದೇವರೇ ಹೌದೆಂದು ನನಗನ್ನಿಸಿತು. ಆ ವ್ಯಕ್ತಿ ಮೈಸೂರಿನಲ್ಲಿಯೇ ವಾಸವಿರುವ ಪ್ರಸಿದ್ಧ ಇಂಗ್ಲಿಷ್ ಸಣ್ಣಕಥೆಗಾರ ಆರ್.ಕೆ. ನಾರಾಯಣ್ ಅಂತ ಎಷ್ಟೋ ದಿನಗಳಾದ ಮೇಲೆ ತಿಳಿಯಿತು. ಎಲ್ಲಿಯಾದರೂ ಅವರ ಕಥೆಗಳಲ್ಲಿ ನಾನೇನಾದರೂ ಒಂದು ಪಾತ್ರವಾಗಿದ್ದೇನೆಯೆ? ಎಂದು ಈಗಲೂ ನಾನು ಕುತೂಹಲದಿಂದಿದ್ದೇನೆ. ಆ ಕಾರಣಕ್ಕಾಗಿಯೇ ಅವರ ಕೆಲವೊಂದು ಕಥೆಗಳನ್ನು ಓದಿಯೂ ಇದ್ದೇನೆ; ಮಾತ್ರವಲ್ಲ, ಈಗ್ಗೆ ಕೆಲವು ವರ್ಷಗಳ ಹಿಂದೆ ಅವರನ್ನು ಕುರಿತು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಲೇಖನಗಳನ್ನು ಬರೆದಿದ್ದೇನೆ.

ಶಾಲೆಯಲ್ಲಿ ಹಾಗೂ ಹೀಗೂ ನನ್ನ ಓದು ಮುಂದುವರಿಯುತ್ತಿತ್ತಾದರೂ ಶಾಲೆಯ ಮಾಸಿಕ ಫೀಸು ಐದು ರೂಪಾಯಿಯನ್ನು ಕಟ್ಟಲು ನನ್ನಿಂದ ಆಗಲಿಲ್ಲ. ನಮ್ಮ ತಂದೆಯವರನ್ನು ಕೇಳಿದರೆ, ಸಾಮಾನ್ಯವಾಗಿ ಸಿಡುಕು ಸ್ವಭಾವದವರಾದ ಅವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದರು ಮತ್ತು ಒಂದೆರಡು ಬಾರಿ ನಮ್ಮ ತರಗತಿಯ ಮೇಷ್ಟ್ರು ಅವರನ್ನು ಕೇಳಿದಾಗ, 'ಪ್ರತಿ ತಿಂಗಳು ಸ್ಕೂಲು ಫೀಸು ಐದು ರೂಪಾಯಿಯನ್ನು ಕೊಟ್ಟು ಕಳಿಸುತ್ತಿದ್ದೇನಲ್ಲ. ಎಲ್ಲೊ ಪೋಲಿ ಮೂದೇವಿ ದುಡ್ಡು ತಿಂದುಹಾಕಿರಬೇಕು' ಎಂದು ಹೇಳಿದ್ದರು. ಮೇಷ್ಟ್ರು ನನಗೆ ತಗಾದೆಗೆ ತೆಗೆದುಕೊಂಡರು. ಈ ರೀತಿ ಕೆಲವು ಬಾರಿ ಆಯಿತು. ನನಗೆ ಏನು ಮಾಡಲೂ ತೋಚಲಿಲ್ಲ. ಯಾರೊಂದಿಗೆ ಹೇಳಿಕೊಳ್ಳಲೂ ಆಗುತ್ತಿರಲಿಲ್ಲ. ಆಗ, ಓದುವ ಆಸೆಯನ್ನು ಬಿಡಲಾರದೆ ಬಿಟ್ಟು, ಒಂದೊಂದಾಗಿ ಇದ್ದಬದ್ದ ಪುಸ್ತಕಗಳನ್ನು ಸೆಕೆಂಡ್ ಹ್ಯಾಂಡ್ ಬುಕ್ ಶಾಪ್‌ಗಳಿಗೆ ಮಾರಿ, ಬಂದ ಚಿಲ್ಲರೆ ದುಡ್ಡು ಹೋಟೆಲ್ಲು ಸಿನಿಮಾಗಳಿಗೆ ಸಾಗಿಸಿದೆ... ಅದೂ ಮುಗಿಯಿತು. ಎಲ್ಲವೂ ಖಾಲಿಯಾಯಿತು. ಓದಬೇಕೆಂಬ ನನ್ನ ಹಂಬಲ ಕುಸಿಯಿತು. ಇನ್ನು ಮೈಸೂರಿನಲ್ಲಿರುವುದೂ ನನ್ನಿಂದ ಆಗಲಿಲ್ಲ. ಮೈಸೂರು ಬಿಡುವುದೆಂದು ನಿಶ್ಚಯಿಸಿದೆ. ಆದರೆ, ಹೋಗುವುದೆಲ್ಲಿಗೆ? ದಿಕ್ಕೇ ತೋಚದು. ಮೈಸೂರು ಬಿಡುವ ಹಿಂದಿನ ರಾತ್ರಿ ಕೆರೆಯ ಹತ್ತಿರದ ಒಂದು ಹೆಬ್ಬಾಗಿಲಿನ ಬಳಿ ಮಲಗಿದ್ದು, ಬೆಳಗಾಗೆದ್ದು ಜೋಬಿನಲ್ಲಿದ್ದ ನಾಲ್ಕಾರು ಕಾಸುಗಳೊಡನೆ ನಡೆದುಕೊಂಡು ಹುಣಸೂರಿನತ್ತ ಪಯಣಿಸಿದೆ. ಕಾರಣ, ಅದು ಊರು ಹುಯಿಲಾಳಿಗೆ ಹೋಗುವ ದಾರಿಯಲ್ಲಿತ್ತು ಮತ್ತು ಆ ರಸ್ತೆ ನನಗೆ ಚೆನ್ನಾಗಿ ಗೊತ್ತಿತ್ತು. ಅಲ್ಲಿಂದ ಊರೂರು ಸುತ್ತುತ್ತಾ, ಭಿಕ್ಷೆ ಬೇಡಿ, ಬಂದ ದುಡ್ಡಿನಲ್ಲಿ ಐದು ರೂಪಾಯಿಗಳನ್ನು ಜೋಪಾನವಾಗಿ ಕೂಡಿಟ್ಟುಕೊಂಡು, ತಿರುಗಿ, ಮೈಸೂರಿಗೆ ನಡೆದುಕೊಂಡು ಬಂದು, ಬೆಂಗಳೂರು ರೈಲು ಹಿಡಿದು, ಹೋಟೆಲ್ ಒಂದರಲ್ಲಿ ಕ್ಲೀನರ್ ಕೆಲಸಕ್ಕೆ ಸೇರಿ, ಬಡ್ತಿ ಪಡೆದು ಸಪ್ಲೈಯರ್ ಆಗಿ, ಕೆಲವು ದಿನಗಳ ಅನಂತರ ಮತ್ತೆ ಮೈಸೂರಿನತ್ತ ಪಯಣ ಬೆಳೆಸಿದೆ. ಬಂದವನೆ ನಾನು ಮಾಡಿದ ಮೊದಲ ಕೆಲಸಗಳಲ್ಲಿ ಒಂದು–ಮೇಟಿಯ ಕಣ್ಣು ತಪ್ಪಿಸಿ ಕೆರೆಯ ಸುತ್ತಮುತ್ತ ಓಡಾಡಿದ್ದು. ಮತ್ತೆ ಮಾರನೆಯ ವರ್ಷ ಅದೇ ಶಾಲೆಯ ಅದೇ ತರಗತಿಗೆ ಎರಡನೆಯ ಬಾರಿ ಸೇರಿದೆನಾದರೂ ಹೆಚ್ಚುಕಡಿಮೆ ಇದೇ ಪರಿಸ್ಥಿತಿ ಒದಗಿತು. ಅಷ್ಟರಲ್ಲಿ ನಮ್ಮ ತಾಯಿಯೂ ಹೊರೆಯಾಲದಿಂದ ಬಂದಿದ್ದರು. ಕೃಷ್ಣಮೂರ್ತಿಪುರ ಬಡಾವಣೆಯಲ್ಲಿ ಅತಿ ಪುಟ್ಟದಾದ ಬಾಡಿಗೆ ಮನೆಯಲ್ಲಿ ಇದ್ದೆವು. ನಮ್ಮ ತಂದೆ ನಾಪತ್ತೆಯಾಗಿದ್ದರು. ಆ ವರ್ಷ ಬದುಕಿಗಾಗಿ ಮೈಸೂರಿನ ಅಂದಿನ ಪ್ರಸಿದ್ಧ ಅಡಿಗೆ ಕಂಟ್ರಾಕ್ಟರ್‌ಗಳಲ್ಲಿ ಒಬ್ಬರಾಗಿದ್ದ ಶಿವರಾಮಪೇಟೆಯ ನಾರಾಯಣರಾವ್ ಎಂಬುವರಲ್ಲಿ ನಾನು ಕೆಲಸಕ್ಕೆ ಸೇರಿದೆ; ನಾನು ಮತ್ತು ನನ್ನ

